Reg No : SWO/231/98-99 ಪುಕ್ಟಕ್ ದೂ. 080–22281847

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ (ರಿ)

**ಅಧ್ಯಕ್ಷರು :**
**ಡಾ॥ ಎನ್.ಬಿ. ಸಂಗಾಪೂರ**
ಮುಖ್ಯಸ್ಥರು, ವಾಣಿಜ್ಯ ಶಾಸ್ತ್ರ ವಿಭಾಗ, ಎಸ್.ಜೆ.ಎಂ .ವಿ. ಮಹಾಂತ ಮಹಾವಿದ್ಯಾಲಯ
ರಾಯಪೂರ, ಧಾರವಾಡ–580 009.
ದೂ : 9449456960 (ಮೊ)
E-mail : nbsangapur@gmail.com

**ಪ್ರಧಾನ ಕಾರ್ಯದರ್ಶಿ :**
**ಡಾ॥ ಸಿ.ಆರ್. ರಾಜು**
ಸಹ ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ
ಪಿ.ಇ.ಎಸ್. ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು ಮಂಡ್ಯ.
ದೂ : 9844470585 (ಮೊ)
E-mail : dr.chara@rediffmail.com

**ಖಜಾಂಚಿ :**
**ಪ್ರೊ. ತಿಪ್ಪೇಸ್ವಾಮಿ**
ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು–572101.
ದೂ : 9740057689 (ಮೊ)
E-mail : gtmedigeshi@gmail.com

ಶ್ರೀ ಟಿ ಬಿ ಜಯಚಂದ್ರ
ಮಾನ್ಯ ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ಸರಕಾರ, ಬೆಂಗಳೂರು–560001.

ಮಾನ್ಯರೇ,

**ವಿಷಯ: ಕಾಲೇಜು ಶಿಕ್ಷಕರ ಬೇಡಿಕೆಗಳು.**

ಸುಮಾರು ಮೂರುವರೆ ದಶಕಗಳ ಇತಿಹಾಸ ಹೊಂದಿರುವ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಶಿಕ್ಷಕರ ಸಂಘಗಳ ಒಕ್ಕೂಟ (ರಿ.), ಬೆಂಗಳೂರು ಇದಕ್ಕೆ ರಾಜ್ಯಾದ್ಯಂತ ಎಲ್ಲಾ ವಿಶ್ವ ವಿದ್ಯಾನಿಲಯಗಳ ಅಧ್ಯಾಪಕರ ಸಂಘಟನೆಗಳು ಸಂಯೋಜನೆಯನ್ನು ಹೊಂದಿರುವ ಐಕ್ಯಕ ಒಕ್ಕೂಟವಾಗಿರುತ್ತದೆ. ಇಡೀ ರಾಜ್ಯದ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶಿಕ್ಷಕರುಗಳ ಸೇವಾ ಸೌಲಭ್ಯಗಳು, ಕಾಲೇಜು ಶಿಕ್ಷಣದ ಗುಣಮಟ್ಟ, ಹಾಗೂ ವಿಶ್ವವಿದ್ಯಾನಿಲಯದ ಕಾರ್ಯವೈಖರಿಯ ಬಗ್ಗೆ ಆಗಿಂದಾಗ್ಯೆ ಗಮನ ಹರಿಸುತ್ತಾ ಬಂದಿರುವುದು ಮಾತ್ರವಲ್ಲದೆ ಸರಕಾರಕ್ಕೆ ಹಾಗೂ ಸಂಬಂಧಪಟ್ಟ ನೀತಿ ನಿರೂಪಕರಿಗೆ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿರುತ್ತದೆ. ರಾಜ್ಯದ ಉನ್ನತ ಶಿಕ್ಷಣದ ಗುಣಮಟ್ಟವನ್ನು ಉನ್ನತೀಕರಿಸುವಲ್ಲಿ ತನ್ನದೇ ರೀತಿಯ ಕೊಡುಗೆಯನ್ನು ನೀಡುತ್ತಿದೆ. ವಿವಿಧ ಸಾಮಾಜಿಕ ಸಮಸ್ಯೆ/ವಿಚಾರಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡಿರುತ್ತದೆ.

ಇದರ ವ್ಯಾಪ್ತಿಯಲ್ಲಿ ರಾಜ್ಯದ ಖಾಸಗೀ ಅನುದಾನಿತ ಶಿಕ್ಷಣ ಸಂಸ್ಥೆಗಳು, ಉನ್ನತ ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಬಹು ದೊಡ್ಡಕೊಡುಗೆಯನ್ನು ನೀಡಿರುವುದು ತಮಗೆ ತಿಳಿದ ವಿಚಾರ. ಆದರೆ ಪ್ರತೀ ಸರಕಾರ ಅಥವಾ ಹೊಸ ಸಚಿವರು ಬಂದಾಗ ನಮ್ಮಲ್ಲಿರುವ ಸಮಸ್ಯೆಗಳನ್ನು ಅವರೆದುರು ಇಡುತ್ತಾ ಬಂದಿದ್ದರೂ ಸಮಸ್ಯೆಗಳ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತಿದೆಯೇ ಹೊರತು ಅನೇಕ ಸಮಸ್ಯೆಗಳು ಪರಿಹಾರವನ್ನು ಕಾಣಲೇ ಇಲ್ಲ. ಆದುದರಿಂದ ಸರ್ಕಾರಿ/ ಅನುದಾನಿತ /ಖಾಸಗಿ ಕಾಲೇಜುಗಳಿಗೆ ಸಂಬಂಧಿಸಿದ ಬಹು ಮುಖ್ಯ ಬೇಡಿಕೆಗಳನ್ನು ತಮ್ಮ ಮುಂದಿಡುತ್ತಿದ್ದೇವೆ. ತಾವು ಇವುಗಳ ಬಗ್ಗೆ ಮುಕ್ತ ಮನಸ್ಸಿನಿಂದ ಪರಿಶೀಲಿಸಿ ಸೂಕ್ತ ಪರಿಹಾರವನ್ನು ಒದಗಿಸಿಕೊಡುವಿರಾಗಿ ತಮ್ಮಲ್ಲಿ ವಿನಮ್ರವಾಗಿ ಕೇಳಿಕೊಳ್ಳುತ್ತೇವೆ.

**ಕಾಲೇಜು ಶಿಕ್ಷಕರ ಬೇಡಿಕೆಗಳು:**

1. **ಯು ಜಿ ಸಿ ಬಾಕಿ ವೇತನ ಪಾವತಿ:** ರಾಜ್ಯದ ಕಾಲೇಜು ಶಿಕ್ಷಕರಿಗೆ 2006 ರಿಂದ ಕೊಡಬೇಕಾಗಿರುವ ಯು ಜಿ ಸಿ ಬಾಕಿ ವೇತನವನ್ನು 2009 ರಲ್ಲಿಯೇ ಕೊಡಬೇಕಿತ್ತು. ಇದೀಗ ಈ ವೇತನ ಜಾರಿಗೆ ಬಂದು 5–6 ವರುಷ ಕಳೆದರು ಪೂರ್ತಿ ಬಾಕಿಯನ್ನು ಕೊಟ್ಟಿರುವುದಿಲ್ಲ. ಶಿಕ್ಷಕರು ತಮಗೆ ಬರಬೇಕಾಗಿರುವ ಬಾಕಿಯ ಮೊತ್ತದ ಶೇಕಡಾ 50ರಷ್ಟು ಮೌಲ್ಯವನ್ನು (ಹಣದುಬ್ಬರವನ್ನು ಪರಿಗಣಿಸಿ) ಈಗಾಗಲೇ ಕಳೆದುಕೊಂಡಿರುತ್ತಾರೆ. ಅದೆಷ್ಟೋ ಮಂದಿ ನಿವೃತ್ತಿಯಾಗಿದ್ದಾರೆ. ಅನೇಕರು ಮರಣ ಹೊಂದಿರುತ್ತಾರೆ. ಆದುದರಿಂದ ಬಹುತೇಕ ಶಿಕ್ಷಕರು ನ್ಯಾಯಾಲದ ಮೊರೆ ಹೋಗಬೇಕಾಯಿತು. ಶಿಕ್ಷಕರಿಗೆ ನ್ಯಾಯವಾಗಿ ಬರಬೇಕಾಗಿರುವ ಯು ಜಿ ಸಿ ಬಾಕಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು. 2006ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ನಿಯಮಾವಳಿಗಳನ್ನು 6–7 ವರ್ಷಗಳು ಕಳೆದರೂ ಪರಿಪೂರ್ಣವಾಗಿ ಶಿಫಾರಸ್ಸುಗಳನ್ನು ಜಾರಿಗೊಳಿಸದಿರುವುದು ವಿಷಾಧನೀಯ. ಸಿ ಅಂಡ್ ಆರ್ ನಿಯಮಾವಳಿಗಳನ್ನು ಪರಿಷ್ಕರಿಸದಿರುವುದು. ಕಾಲೇಜು ಪ್ರಾಂಶುಪಾಲರುಗಳ ಹುದ್ದೆಗಳನ್ನು ಅನುಮೋದಿಸದಿರುವುದು. ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡದಿರುವುದು. ಪಿ.ಎಚ್‌ಡಿ ವೇತನ ಭಡ್ತಿಗಳಲ್ಲಿನ

ಗೊಂದಲಗಳನ್ನು ಸರಿಪಡಿಸದಿರುವುದು. ಯುಜಿಸಿಯ ಮಾರ್ಗ ಸೂಚಿಗಳನ್ನು ಜಾರಿಗೊಳಿಸದಿರುವುದು. ಈ ಬೇಡಿಕೆಗಳನ್ನು ಕೂಡಲೇ ಈಡೇರಿಸುವತ್ತಾ ಗಮನ ಮಾಡುವುದು.

2. **ಕಾಲ್ಪನಿಕ ವೇತನ ಸಮಸ್ಯೆ ಬಗೆಹರಿಯಬೇಕು:** ಅನುದಾನಿತ ಕಾಲೇಜುಗಳ ನೌಕರರಿಗೆ ಬಹುದೊಡ್ಡ ಆಘಾತವನ್ನು ತಂದೊಡ್ಡಿರುವ ಕಾಲ್ಪನಿಕ ವೇತನ ಸಮಸ್ಯೆಯನ್ನು ಯಾವುದೇ ನೌಕರನಿಗೆ ತೊಂದರೆಯಾಗದ ರೀತಿಯಲ್ಲಿ, ಶ್ರೀ ಬಸವರಾಜ ಹೊರಟ್ಟಿ ಸಮಿತಿಯ ಶಿಫಾರಸಿನಂತೆ ಪರಿಹರಿಸಬೇಕು.

3. **ಪದವಿ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರು ಹಾಗೂ ಶಿಕ್ಷಕೇತರ ಹುದ್ದೆಗಳನ್ನು ಭರ್ತಿ ಮಾಡುವುದು:** ಪದವಿ ಕಾಲೇಜುಗಳಲ್ಲಿ ಶೇಕಡಾ 60 ಕ್ಕಿಂತಲೂ ಹೆಚ್ಚು ಉಪನ್ಯಾಸಕರು ಹಾಗೂ ಶಿಕ್ಷಕೇತರ ಹುದ್ದೆಗಳು ಕಳೆದ 20 ವರುಷಗಳಿಂದ ಖಾಲಿಯಾಗಿದ್ದು, ಶಿಕ್ಷಣದ ಗುಣಮಟ್ಟ ಸುಧಾರಿಸಬೇಕಾದರೆ ಈ ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮಕೈಗೊಳ್ಳಬೇಕು.

4. **ಖಾಸಗೀ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ತರುವುದು:** ಈಗಾಗಲೇ 10-20 ವರುಷಗಳಿಂದ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಖಾಸಗೀ ಪದವಿ ಕಾಲೇಜುಗಳನ್ನು ಅಂದರೆ 01.07.1987ರ ನಂತರ 31.03.1995ರ ಅವಧಿಯ ನಡುವೆ ತೆರೆದಿರುವ ಖಾಸಗೀ ಪದವಿ ಕಾಲೇಜುಗಳನ್ನು ಹಾಗೂ ಇದೇ ಅವಧಿಯಲ್ಲಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಹೊಸದಾಗಿ ತೆರೆದಿರುವ ವಿಭಾಗ ಮತ್ತು ಕೋರ್ಸುಗಳನ್ನು ಅನುದಾನದ ಕಕ್ಷೆಗೆ ಒಳಪಡಿಸಿ, ಗ್ರಾಮೀಣ, ಹಿಂದುಳಿದ ಹಾಗು ಬಡ ವಿದ್ಯಾರ್ಥಿಳಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಕ್ರಮಕೈಗೊಳ್ಳಲು ಕೋರುತ್ತೇವೆ.

5. **ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳನ್ನು ಖಾಸಗಿ/ಅನುದಾನಿತ ಕಾಲೇಜುಗಳಿಗೆ ವಿಸ್ತರಿಸುವುದು:** ಸರಕಾರಿ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸರಕಾರದ ವಿವಿಧ ಸವಲತ್ತುಗಳನ್ನು ನೀಡಲಾಗುತ್ತಿದ್ದು ಖಾಸಗಿ/ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳು ಗ್ರಾಮೀಣ, ಹಿಂದುಳಿದ ಹಾಗು ಬಡ ವಿದ್ಯಾರ್ಥಿಳಾಗಿದ್ದರೂ ಇಂತಹ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದುದರಿಂದ ಸರಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ನೀಡುವ ಎಲ್ಲಾ ಸೌಲಭ್ಯಗಳು ಖಾಸಗಿ/ಅನುದಾನಿತ ಕಾಲೇಜುಗಳಿಗೂ ವಿಸ್ತರಿಸಬೇಕು.

6. **ಅನುದಾನಿತ ಕಾಲೇಜುಗಳ ಶಿಕ್ಷಕರು ಹಾಗೂ ಶಿಕ್ಷಕೇತರರಿಗೆ ನಿಯಮಿತವಾಗಿ ವೇತನ ಹಾಗೂ ಭಡ್ತಿ ನೀಡಬೇಕು:** ಅನುದಾನಿತ ಕಾಲೇಜುಗಳ ಸಿಬ್ಬಂಧಿಗಳಿಗೆ ಪ್ರತೀ ತಿಂಗಳೂ ವೇತನ ಬಿಡುಗಡೆಯಲ್ಲಿ ತಡವಾಗುತ್ತಿದ್ದು, ಪ್ರತೀ ತಿಂಗಳಿನ 5 ನೇ ತಾರೀಖಿನೊಳಗಾಗಿ ಸಿಗುವಂತಾಗಬೇಕು. ಅದೇ ರೀತಿ ಕಾಲ ಕಾಲಕ್ಕೆ ದೊರೆಯಬೇಕಾಗಿರುವ ಭಡ್ತಿ ಕೂಡಾ 2-3 ವರುಷಗಳಾದರೂ ದೊರೆಯುತ್ತಿಲ್ಲ. ಬಹುಷ ಯಾವುದೇ ಇಲಾಖೆಯಲ್ಲಿ ಈ ಪರಿಸ್ಥಿತಿ ಇರಲಾರದು. ಎಲ್ಲರಿಗೂ ನಿಯಮಾನುಸಾರ ಸಿಗಬೇಕಾಗಿರುವ ವೇತನ, ಭತ್ಯೆ, ಭಡ್ತಿ, ಬಾಕಿ ವೇತನ ಯಾವುದೇ ರೀತಿಯ ವಿಳಂಭವಿಲ್ಲದೆ ದೊರೆಯುವಂತಾಗಬೇಕು.

7. **ವಿಶ್ವವಿದ್ಯಾನಿಲಯದ ನೀತಿ ನಿರೂಪಣಾ ಸಮಿತಿಗಳಲ್ಲಿ ಕಾಲೇಜು ಶಿಕ್ಷಕರಿಗೆ ಅವಕಾಶ ಇರುವಂತಾಗಬೇಕು:** ಉನ್ನತ ಶಿಕ್ಷಣದ ನೀತಿ, ನಿಯಮಗಳನ್ನು ರೂಪಿಸುವ ಸಿಂಡಿಕೇಟ್, ಅಕಾಡಮಿಕ್ ಕೌನ್ಸಿಲ್‌ನಂತಹ ಬಹುತೇಕ ಸಮಿತಿಗಳಿಂದ ಕಾಲೇಜು ಶಿಕ್ಷಕರನ್ನು ಹೊರಗಿಡಲಾಗಿದೆ. ಉನ್ನತ ಶಿಕ್ಷಣದ ಬಹು ಮುಖ್ಯ ಅಂಗವಾದ ಕಾಲೇಜು ಶಿಕ್ಷಕರನ್ನು ಈ ಸಮಿತಿಗಳಿಗೆ ನೇಮಕವಾಗುವ ನಿಟ್ಟಿನಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡಬೇಕು.

8. **ರಾಜ್ಯದ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ದುಪ್ಪಟ್ಟು ಶುಲ್ಕವನ್ನು ಪೂರ್ತಿಯಾಗಿ 2003-04 ರಿಂದ 2013-14 ರ ಅವಧಿಗೆ ಜಂಟಿ ಖಾತೆಗೆ ಜಮೆ ಮಾಡುವ ವಿಚಾರದಲ್ಲಿ ವಿನಾಯಿತಿ ನೀಡುವ ಬಗ್ಗೆ:** 1977 ರಿಂದ ಅನುದಾನಿತ ವ್ಯವಸ್ಥೆ ಬಂದಾಗಿನಿಂದ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರದ ಕಾಲೇಜುಗಳಲ್ಲಿ ಸಂಗ್ರಹಿಸುವ ಶುಲ್ಕಕ್ಕಿಂತ ದುಪ್ಪಟ್ಟು ದರದಲ್ಲಿ ಸಂಗ್ರಹಿಸಿಕೊಳ್ಳಲು ಒಪ್ಪಂದವಾಗಿದ್ದು, ಒಂದು ಭಾಗವನ್ನು ಜಂಟಿ ಖಾತೆಗೂ ಮತ್ತೊಂದು ಭಾಗವನ್ನು ಕಾಲೇಜುಗಳ ಅಭಿವೃದ್ಧಿಗಾಗಿ ಹಾಗೂ ನಿರ್ವಹಣೆಗಾಗಿ ಬಳಸಿಕೊಳ್ಳಲು ಅವಕಾಶವಿತ್ತು. ಇದರಂತೆ 2003 ರವರವಿಗೂ ನಡೆದುಕೊಂಡು ಬಂದಿದ್ದು 2003 ರಲ್ಲಿ ಈ ವಿಚಾರಕ್ಕೆ ತಿದ್ದುಪಡಿ ತಂದು ದುಪ್ಪಟ್ಟು ಶುಲ್ಕವನ್ನು ಜಂಟಿ ಖಾತೆಗೆ ಜಮಾ ಮಾಡತಕ್ಕದೆಂದು ಆದೇಶಿಸಲಾಯ್ತು. ಆದರೆ ಆಡಳಿತ ಮಂಡಳಿಗಳು ನಿರ್ವಹಣೆಗಾಗಿ ಒಂದಂಶವನ್ನು ತಾವೇ ಉಳಿಸಿಕೊಂಡು ಉಳಿದ ಒಂದಂಶವನ್ನು ಜಂಟಿ ಖಾತೆಗೆ ಜಮಾ ಮಾಡಿರುತ್ತಾರೆ. ಸರ್ಕಾರಕ್ಕೆ ಕಾಲಕಾಲಕ್ಕೆ ದುಪ್ಪಟ್ಟು ಶುಲ್ಕವನ್ನು ಭರಿಸಲಾಗದೆಂದು ತಿಳಿಸುತ್ತಾ, ಒತ್ತಾಯಿಸಿದ ಮೇರೆಗೆ ಪ್ರಸ್ತುತ ಸರ್ಕಾರವೂ ದುಪ್ಪಟ್ಟು ಶುಲ್ಕದಲ್ಲಿ ಒಂದಂಶವನ್ನು ಜಂಟಿ ಖಾತೆಗೆ ಜಮಾ ಮಾಡಲು ಒಪ್ಪಿ 2013-14ರಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತದೆ. 2003-04 ರಿಂದ 2013-14ರ ಅವಧಿಯ ದುಪ್ಪಟ್ಟು ಶುಲ್ಕದ ಬಾಕಿಗಾಗಿ ಒತ್ತಾಯಿಸಿ ಇಲಾಖೆಯು ವೇತನಾನುದಾನವನ್ನು ತಡೆಯಿಡಿಯುವ

ಎಚ್ಚರಿಕೆಯನ್ನು ಆಡಳಿತ ಮಂಡಳಿಗಳಿಗೆ ನೀಡಿರುವುದು ಅತ್ಯಂತ ಆತಂಕದ ವಿಚಾರವಾಗಿರುತ್ತದೆ. ಈ ಬಗ್ಗೆ ಸೂಕ್ತವಾಗಿ ಗಮನಿಸಿ ಈ ದುಪ್ಪಟ್ಟು ಶುಲ್ಕದ ವಿನಾಯಿಯನ್ನು 2003-04ರಿಂದಲೇ ಪೂರ್ವಾನ್ವಯಗೊಳ್ಳುವಂತೆ ಕ್ರಮ ಮಾಡಿಸಿಕೊಡಬೇಕು. ಇಲ್ಲವಾದಲ್ಲಿ ಖಾಸಗಿ ಅನುದಾನಿತ ವಲಯದಲ್ಲಿನ ಎಲ್ಲಾ ಶಿಕ್ಷಕರು/ ಶಿಕ್ಷಕೇತರರು ಭವಣಿಗೆ ಒಳಗಾಗಲಿದ್ದೇವೆ.

9. **ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಅನುಕಂಪ ಆದಾರಿತ ಉದ್ಯೋಗಗಳನ್ನು ನೀಡುವ ಬಗ್ಗೆ:** ಈ ಹಿಂದಿನಿಂದಲೂ ಖಾಸಗಿ ಅನುದಾನಿತ ಉದ್ಯೋಗಿಗಳು ಸೇವೆಯಲ್ಲಿರುವಾಗ ಮೃತ ಪಟ್ಟಾಗ ಕುಟುಂಬಸ್ಥರಿಗೆ ಅರ್ಹತೆ ಆದಾರದ ಮೇಲೆ ಅನುಕಂಪದ ಉದ್ಯೋಗ ನೀಡಲಾಗುತ್ತಿತ್ತು. ಈ ನಡುವೆ 1987 ರಿಂದ ರದ್ದುಪಡಿಸಲಾಗಿ, ತದನಂತರ ಈ ನಿಷೇಧವನ್ನು ಹಿಂಪಡೆದು ಖಾಸಗಿ ವಲಯದ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೊಳಿಸಿ ಅನುಕಂಪದ ನೇಮಕಾತಿಗಳನ್ನು ಮಾಡಲಾಗುತ್ತಿದೆ. ಆದರೆ ಕಾಲೇಜು ಶಿಕ್ಷಣ ವಿಭಾಗದಲ್ಲಿನ ಅನುದಾನಿತ ಉದ್ಯೋಗಿಗಳಿಗೆ ಈ ಸೌಲಭ್ಯವನ್ನು ವಿಸ್ತರಿಸದೇ ಮೃತರಾದವರ ಅನೇಕ ಕುಟುಂಬಗಳು ಸಂಕಷ್ಟದಲ್ಲಿ ಸಿಲುಕಿವೆ. ಆದ್ದರಿಂದ ಈ ಸೌಲಭ್ಯವನ್ನು ಪೂರ್ವಾನ್ವಯವಾಗುವಂತೆ ವಿಸ್ತರಿಸಿ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಬೋಧಕ/ ಬೋಧಕೇತರರಿಗೆ ಅನುಕೂಲ ಕಲ್ಪಿಸಿಕೊಡಲು ಕೋರುತ್ತೇವೆ.

10. **ಖಾಸಗಿ ಪದವಿ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಉಪನ್ಯಾಸಕರುಗಳಿಗೆ ಸರ್ಕಾರದ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿರುವ ದರದಲ್ಲಿ ವೇತನ ವ್ಯವಸ್ಥೆ ಮಾಡಿಸಿಕೊಡುವ ಬಗ್ಗೆ:** ಅನೇಕ ಖಾಸಗಿ ಪದವಿ ಕಾಲೇಜುಗಳು ಪ್ರತಿಭಾನ್ವಿತರಿಂದ ಅತೀ ಕಡಿಮೆ ವೇತನಕ್ಕೆ ದುಡಿಸಿಕೊಳ್ಳುತ್ತಿದ್ದು, ಅಧ್ಯಾಪಕರುಗಳು ಸಮಾಧಾನದಿಂದ ಕರ್ತವ್ಯ ನಿರತರಾಗದ ವಾತಾವರಣಗಳನ್ನುಅನೇಕ ಕಾಲೇಜುಗಳಲ್ಲಿ ಕಾಣುತ್ತಿದ್ದೇವೆ. ಆದ್ದರಿಂದ ಅನುದಾನಿತ ಕಾಲೇಜುಗಳಲ್ಲಿನ ಅನುದಾನಿದ ಕಾರ್ಯಬಾರದೆದುರು ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರಗಳಿಗೆ ಸರ್ಕಾರವೇ ಈ ಹಿಂದೆ ನೀಡುತ್ತದಂತೆ ವೇತನಾನುದಾನ ನೀಡುವುದು. ಅನುದಾನ ರಹಿತ ಕಾಲೇಜುಗಳಲ್ಲಿನ ಹಂಗಾಮಿ ಅಧ್ಯಾಪಕರುಗಳಿಗೆ ನಿಯಮಿತವಾದ ವೇತನ ನೀಡುವಂತೆ ಆಡಳಿತ ಮಂಡಳಿಗಳ ಮೇಲೆ ಕ್ರಮ ಕೈಗೊಳ್ಳಲು ಕೋರಿಕೆ.

11. **ಕಾಲೇಜು ಶಿಕ್ಷಕರ ಸಂಘಟನೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು:**ಕಾಲೇಜು ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ನೀತಿ, ನಿಯಮ, ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಕಾಲೇಜು ಶಿಕ್ಷಕರ ಒಕ್ಕೂಟ ಹಾಗೂ ಸ್ಥಳೀಯ ಮಟ್ಟದ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಕಾಲಕಾಲಕ್ಕೆ ಸಂಘಟನೆಯ ಪದಾಧಿಕಾರಿಗಳನ್ನು ಇಲಾಖಾ ಅಧಿಕಾರಿಗಳೊಂದಿಗೆಮುಕ್ತ ಚರ್ಚೆ ನಡೆಸುವರೇ ಸಭೆಗಳನ್ನು ನಡೆಸಬೇಕು.

ದಯವಿಟ್ಟು ಮೇಲಿನ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಪರಿಹಾರವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

ಡಾ|| ಎನ್.ಬಿ. ಸಂಗಾಪೂರ
ಅಧ್ಯಕ್ಷರು

ಡಾ.ಸಿ.ಆರ್.ರಾಜು
ಪ್ರಧಾನ ಕಾರ್ಯದರ್ಶಿ